**ಸಾಕ್ಷಿಯನ್ನು ದಿನಾಂಕಃ 19-09-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀ ಸವಾಲು 2 ರಿಂದ 4 ನೇ ಪ್ರತಿವಾದಿ ಪರ ವಕೀಲರವರಿಂದಃ**

ದಿಃ24.01.2005 ರಂದು ನಾನು ಎಲ್ಲಿ ಇದ್ದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ದಿನದಂದು ನನ್ನ ಗಂಡ ಹಾಗೂ ನನ್ನ ಅತ್ತೆಯವರಾದ 1 ನೇ ಪ್ರತಿವಾದಿಯವರು 4 ನೇ ಪ್ರತಿವಾದಿಯಿಂದ ರೂ.4,00,000/- ಹಣವನ್ನು ಪಡೆದಿರುವರು ಎಂದರೆ ಸರಿಯಲ್ಲ. ಸದರಿ ದಿನದಂದು ನನ್ನ ಗಂಡ ಹಾಗೂ ನನ್ನ ಅತ್ತೆ 2 ನೇ ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಗೆ ಖರೀದಿ ನೀಡಿರುವರು ಎಂದರೆ ಸರಿಯಲ್ಲ. ದಿಃ25.01.2011 ರಂದು 1 ನೇ ಪ್ರತಿವಾದಿ ಹಾಗೂ ನನ್ನ ಗಂಡ ಹರಪನಹಳ್ಳಿ ಉಪನೊಂದಣಿ ಕಛೇರಿಯಲ್ಲಿ ಖಂಡಿತ ಖರೀದಿ ಕ್ರಯ ಕರಾರನ್ನು 4 ನೇ ಪ್ರತಿವಾದಿಯ ಹೆಸರಿಗೆ ಬರೆದು ನೊಂದಣಿ ಮಾಡಿಸಿ ಕೊಟ್ಟಿರುವರು ಎಂದರೆ ಸರಿಯಲ್ಲ. ದಿಃ24.01.2013 ರಂದು ನನ್ನ ಗಂಡ 4 ನೇ ಪ್ರತಿವಾದಿಯಿಂದ ಬಾಕಿ ಉಳಿದ ಹಣವನ್ನು ಪಡೆದು ಆ ಬಗ್ಗೆ ಹಿಂಬರಹವನ್ನು ನಿಪಿ-7 ರ ಮೂಲ ಪ್ರತಿಯ ಹಿಂಭಾಗದಲ್ಲಿ ಬರೆದಿರುವರು ಎಂದರೆ ಸರಿಯಲ್ಲ.

ಸದರಿ ಖರೀದಿ ಕರಾರಿನ ಪ್ರಕಾರ ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ಖರೀದಿ ಪತ್ರವನ್ನು 4 ನೇ ಪ್ರತಿವಾದಿಗೆ ಬರೆದ ಕೊಡದ ಕಾರಣ ದಿಃ16.01.2014 ರಂದು 4 ನೇ ಪ್ರತಿವಾದಿ ನನ್ನ ಗಂಡನಿಗೆ ನೋಟಿಸನ್ನು ನೀಡಿದ್ದರು ಎಂದರೆ ಸರಿಯಲ್ಲ. ನಂತರ ದಿಃ23.06.2016 ರಂದು ನನ್ನ ಗಂಡ ಹಾಗೂ ನನ್ನ ಅತ್ತೆಯವರಾದ 1 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಹೆಸರಿಗೆ 2 ನೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೊಂದಾಯಿತ ಖರೀದಿ ಪತ್ರವನ್ನು ಹರಪನಹಳ್ಳಿ ಉಪನೊಂದಣಿ ಕಛೇರಿಯಲ್ಲಿ ಬರೆಸಿಕೊಟ್ಟಿರುವರು ಎಂದರೆ ಸರಿಯಲ್ಲ. ಸದರಿ ಕ್ರಯ ಕರಾರು ಮತ್ತು ಖರೀದಿ ಪತ್ರಗಳು ಆಗಿರುವ ವಿಚಾರ ಅದೇ ಸಮಯದಲ್ಲಿ ಗೊತ್ತಾಗಿತ್ತು ಎಂದರೆ ಸಾಕ್ಷಿಯು ನನ್ನ ಗಂಡ ತೀರಿಕೊಂಡ ನಂತರ ಗೊತ್ತಾಯಿತು ಎಂದು ನುಡಿದರು.

ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ನಾನು ಜುಲೈ 2016 ರಲ್ಲಿ ಪಡೆದುಕೊಂಡಿದ್ದೇನೆ. ನಾನು ವಿವಾಹಕ್ಕೂ ಮೊದಲೂ ಕೂಡ್ಲಿಗಿ ತಾಲ್ಲೂಕಿನ ಪಾಲಯ್ಯನಕೋಟೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆನು. ಆ ರೀತಿ 2000 ನೇ ಸಾಲಿನಲ್ಲಿ ಕೆಲಸ ಮಾಡುತ್ತಿದ್ದೆನು. ಅಲ್ಲಿಂದ ನನಗೆ ಕೂಡ್ಲಿಗಿ ತಾಲ್ಲೂಕಿನ ತುಪ್ಪಕ್ಕನಹಳ್ಳಿಗೆ ವರ್ಗಾವಣೆಯಾಯಿತು. ಅಲ್ಲಿ ನಾನು 2011 ನೇ ಸಾಲಿನವರೆಗೆ ಶಿಕ್ಷಕಿಯಾಗಿ ಕೆಲಸ ಮಾಡಿರುವೆನು. 2011 ಮತ್ತು 2012 ರ ಅವಧಿಯಲ್ಲಿ ನಾನು ಪಾಲಯ್ಯನಕೋಟೆ ಹಾಗೂ ತುಪ್ಪಕ್ಕನಹಳ್ಳಿಯಲ್ಲಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ನಾನು ಸದರಿ ಸ್ಥಳಗಳಲ್ಲಿ ವಾಸವಿದ್ದು ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಆದ್ದರಿಂದ ನನಗೆ ನನ್ನ ಗಂಡನ

ಮನೆಯಾದ ಕಡಬಗೆರೆಯಲ್ಲಿ ವಾಸಮಾಡಲು ಸಾಧ್ಯ ಆಗಲಿಲ್ಲ ಎಂದರೆ ನನಗೆ ಆಗ ಮದುವೆಯಾಗಿರುವುದಿಲ್ಲ. ನಾನು ದಿಃ02.02.2003 ರಂದು ವಿವಾಹವಾಗಿದ್ದೇನೆ.

ಕ್ರಯ ಕರಾರು ಹಾಗೂ ಖರೀದಿ ಪತ್ರ ಆದ ಕಾಲಕ್ಕೆ ನಾನು ಕಡಬಗೆರಿಯಲ್ಲಿ ವಾಸವಿದ್ದೆನು ಎಂದರೆ ಸರಿಯಲ್ಲ. ನನ್ನ ಮದುವೆಯ ಮುಂಚೆ ನನಗೆ ನನ್ನ ಗಂಡನ ಮನೆಯ ಆರ್ಥಿಕ ಪರಿಸ್ಥಿಯ ಬಗ್ಗೆ ಗೊತ್ತಿರಲಿಲ್ಲ. 1 ನೇ ಪ್ರತಿವಾದಿಗೆ 2 ನೇ ದಾವಾ ಸ್ವತ್ತು ಮಾತ್ರ ಕುಟುಂಬದ ನಿರ್ವಹಣೆಗೆ ಆದಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ವಿವಾಹದ ನಂತರವೂ ಕೂಡ 1 ನೇ ಪ್ರತಿವಾದಿಗೆ ಸದರಿ 2 ನೇ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯನ್ನಾಗಲೀ, ನನ್ನ ಗಂಡನ ಮನೆಯ ಆಗುಹೋಗುಗಳನ್ನು ಯಾವತ್ತೂ ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆರೋಗ್ಯ ಸರಿಯಿರಲಿಲ್ಲ ಎಂದರೆ ಸರಿ. ಆ ಕಾರಣ ಆತ ಯಾವುದೇ ದುಡಿಮೆ ಮಾಡುತ್ತಿರಲಿಲ್ಲ ಎಂದರೆ ಸರಿ.

ನನ್ನ ಆಧಾರ್ ಕಾರ್ಡಿನಲ್ಲಿ ಕಡಬಗೆರಿಯ ವಿಳಾಸ ನಮೂದು ಇರುವುದು. 2 ನೇ ದಾವಾ ಆಸ್ತಿ ಮಳೆ ಆಧಾರಿತ ಜಮೀನು ಎಂದರೆ ಸರಿಯಲ್ಲ. ಮಳೆ ಬಾರದಿದ್ದರೆ ಹಾಕಿದ ಬಂಡವಾಳ ನಷ್ಟವಾಗುತ್ತಿತ್ತು ಎಂದರೆ ಸರಿ. ನನ್ನ ಗಂಡ ಯಾರ ಬಳಿಯೂ ಸಾಲ ಮಾಡಿರಲಿಲ್ಲ. ನನ್ನ ಕುಟುಂಬದ ಸಾಲವನ್ನು ನನ್ನ ಸಂಬಳದಿಂದ ತೀರಿಸುತ್ತಿದ್ದೆನು ಎಂದು ದಾವೆಯಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ದಾವೆಯಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ತಿಳಿಸಿರುವ ಸಾಲಗಳನ್ನು ನನ್ನ ಅತ್ತೆ ಮಾಡಿದ್ದರು. ಅವರು ಯಾವ ಕಾರಣಕ್ಕೆ ಸಾಲವನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ದಾವೆಯಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ನನ್ನ ಗಂಡ ಚಟವನ್ನು ತೀರಿಸಿಕೊಳ್ಳಲು ಸಾಲವನ್ನು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಮಾಡಿರುವ ಸಾಲವನ್ನು ತೀರಿಸಲು ನನ್ನ ಗಂಡ ಹಾಗೂ 1 ನೇ ಪ್ರತಿವಾದಿ 2 ನೇ ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಆತನಿಂದ 5 ಲಕ್ಷವನ್ನು ಪಡೆದುಕೊಂಡು ಮಾರಾಟ ಮಾಡಿರುವರು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸಹ 4 ನೇ ಪ್ರತಿವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ನನ್ನ ನಾದಿನಿಯ ಗಂಡ. 4 ನೇ ಪ್ರತಿವಾದಿ ನನಗೆ ಸಂಬಂಧಿಕನಾಗಿರುವ ಕಾರಣ ಮತ್ತು ಕುಟುಂಬದ ಕಲಹಗಳಿರುವ ಕಾರಣ 4 ನೇ ಪ್ರತಿವಾದಿಯ ಹಕ್ಕನ್ನು ನಷ್ಟಗೊಳಿಸಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರವರಿಂದಃ**

1 ನೇ ಪ್ರತಿವಾದಿ ನನಗೆ ಅತ್ತೆಯಾಗಬೇಕು ಎಂದರೆ ಸರಿ. ನನ್ನ ವಿವಾಹವಾದ ದಿನವೇ ಇನ್ನೊಂದು ಜೊಡಿಯ ವಿವಾಹ ವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ನಾನೆ ಮಾಡಿದ್ದೇನೆ ಎಂದು ನುಡಿದರು. 1 ನೇ ಪ್ರತಿವಾದಿ ಈಗ ಶಾಮನೂರಿನಲ್ಲಿ ವಾಸವಿರುವರು. ನನ್ನ ಗಂಡನಿಗೆ ವಿವಾಹ ಪೂರ್ವದಲ್ಲಾಗಲೀ ಮತ್ತು ನಂತರವಾಗಲೀ ಕುಡಿತದ ಚಟವಿರಲಿಲ್ಲ ಎಂದರೆ ಸರಿಯಲ್ಲ. ನಾನು ಕಡಬಗೆರಿಯಲ್ಲಿ ವಾಸವಿದ್ದ ಕಾರಣ ಹಾಗೂ 1 ನೇ ಪ್ರತಿವಾದಿಯನ್ನು ನೋಡಿಕೊಳ್ಳಲು ನಿರಾಕರಿಸಿದ ಕಾರಣ ನನ್ನ ಗಂಡ ಕುಡಿತದ ಚಟಕ್ಕೆ ಬಲಿಯಾದರು ಎಂದರೆ ಸರಿಯಲ್ಲ. ನನ್ನ ಗಂಡ ಇಸ್ಪೀಟ್ ಆಟವನ್ನು ಆಡುತ್ತಿದ್ದರು ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ನನ್ನ ಗಂಡ ಕುಡಿಯುತ್ತಿದ್ದರು ಮತ್ತು ಇಸ್ಪೀಟ್ ಆಟ ಆಡುತ್ತಿದ್ದರು ಎಂದು ಬರೆಸಿದ್ದೇನೆ ಎಂದರೆ ಇತ್ತೀಚಿನ ದಿನಗಳಲ್ಲಿ ಮಾಡುತ್ತಿದ್ದರು. ನನ್ನ ಗಂಡ ತನ್ನ ಚಟಗಳಿಗಾಗಿ ಹಲವಾರು ಜನರ ಬಳಿ ಸಾಲವನ್ನು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸಾಲವನ್ನು ಕೊಡಬಾರದು ಎಂದು ನಾನು ಊರಿನಲ್ಲಿ ಹೇಳಿದ್ದೆನು ಎಂದು ವಾದ ಪತ್ರ ಮತ್ತು ಮುಖ್ಯವಿಚಾರಣೆಯಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ತೀರಿಸಲು ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ಸೇರಿಕೊಂಡು ರೂ.5,00,000/-ಕ್ಕೆ 2 ನೇ ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವರು ಎಂದರೆ ಸರಿಯಲ್ಲ.

ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಸದರಿ ಹಣವನ್ನು ಪಡೆದ ಕಾಲಕ್ಕೆ ನಾನು ಹಾಜರು ಇರಲಿಲ್ಲವಾದ ಕಾರಣ ನನಗೆ ಆ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ನನ್ನ ಗಂಡ ಹಾಗೂ 1 ನೇ ಪ್ರತಿವಾದಿ 4 ನೇ ಪ್ರತಿವಾದಿಯಿಂದ ರೂ.1,00,000/-ವನ್ನು ಪಡೆದಿರುವರು ಎಂದರೆ ಸರಿಯಲ್ಲ. ಆಗ ಕೂಡ ನಾನು ಹಾಜರಿಲ್ಲದ ಕಾರಣ ನನಗೆ ಸದರಿ ವ್ಯವಹಾರದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬಸ್ ಕಂಪನಿ ನಡೆಸುತ್ತಿದ್ದರು ಎಂದರೆ ನಾನೆ ಮಾಡಿಕೊಟ್ಟಿದ್ದೆನು. ಅದು ನಷ್ಟವಾಯಿತು ಎಂದರೆ ಸರಿಯಲ್ಲ. ನಂತರ ಅವರು ಹೋಟೆಲ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹೋಟೆಲ್ ನಷ್ಟವಾದ ಕಾರಣ ನನ್ನ ಗಂಡ ಸಾಲವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ಸಾಲವನ್ನು ತೀರಿಸಲು 2 ನೇ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಣವನ್ನು ಪಡೆದಿರುವ ವಿಚಾರ ಗೊತ್ತಿದ್ದರು ಸಹ ಅದರ ದುರ್ಲಾಭವನ್ನು ಪಡೆಯಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. 244/2016
P.W.1

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

19.09.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**